# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಾರ್ಡ್ ಸಂಖ್ಯೆ.28, (ಹೊಸ ವಾರ್ಡ್ ಸಂಖ್ಯೆ.101) ಕಮ್ಮನಹಳ್ಳಿಗೆ ಸಂಬಂಧಿಸಿದಂತೆ ವಾರ್ಡ್ ಸಮಿತಿಯ ಸಭೆಯನ್ನು ದಿನಾಂಕ: 13-01-2023 ರಂದು ಆಯೋಜಿಸಿದ್ದು, ಸದರಿ ವಾರ್ಡ್ ಸಮಿತಿ ಸಭೆಯ ನಡವಳಿಗಳು**

1. ಶ್ರೀ ವಿನಾಯಕ ವಿ ನಾಯ್ಕ (ನೋಡಲ್ ಅಧಿಕಾರಿ)
2. ಶ್ರೀ ಎಸ್. ರಾಜನ್ (ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು)
3. ಶ್ರೀ ಜಿ ಹನುಮಂತಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು,
4. ಶ್ರೀಮತಿ ಶ್ರೀಲಕ್ಷ್ಮಿ, ಕಿರಿಯ ಆರೋಗ್ಯ ನಿರೀಕ್ಷಕರು,
5. ಕೆ ಶೀಲಾ, ಕಲ್ಯಾಣ ಇಲಾಖೆ,
6. ಶ್ರೀ ಎಸ್ ಕುಮಾರ್, ಸ್ಥಳೀಯರು,
7. ಶ್ರೀ ಕೆಂಪರಾಜ್, ಸ್ಥಳೀಯರು,
8. ಶ್ರೀ ಶ್ರೀಧರ್, ಸ್ಥಳೀಯರು,
9. ಶ್ರೀ ಗೋಪಾಲ ರೆಡ್ಡಿ, ಸ್ಥಳೀಯರು,
10. ಶ್ರೀ ಕಾರೂನ್, ಸ್ಥಳೀಯರು,
11. ಶ್ರೀ ಮಂಜುನಾಥ, ಕಿರಿಯ ಅಭಿಯಂತರರು, ಬಿಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ
12. ಶ್ರೀ ಘನಶ್ಯಾಮ್ ಯಾದವ್, ಸ್ಥಳೀಯರು,

ಈ ಸಭೆಗೆ ಹಾಜರಾಗಿದ್ದ ಅಧ್ಯಕ್ಷರು (ನೋಡೆಲ್ ಅಧಿಕಾರಿ) ಹಾಗೂ ಅಧಿಕಾರಿಗಳನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರು ಹಾಗೂ ಸದಸ್ಯರುಗಳನ್ನು ಸ್ವಾಗತ ಕೋರಿ, ನೋಡೆಲ್ ಅಧಿಕಾರಿಯವರು ತಮ್ಮ ಕಿರು ಪರಿಚಯವನ್ನು ಸಭೆಯಲ್ಲಿ ನೆರೆದಿದ್ದ ಸದಸ್ಯರಿಗೆ ತಿಳಿಸಿ, ಸಭೆಯನ್ನು ಪ್ರಾರಂಭಿಸಲಾಯಿತು.

| ಕ್ರಸಂ | ಚರ್ಚಿಸಿದ ವಿಷಯಗಳು | ಸಂಬಂಧಪಟ್ಟ ಇಲಾಖೆ | ಕ್ರಮ ಕೈಗೊಂಡ ವರದಿಯನ್ನು ಒಂದು ವಾರದ ಒಳಗಾಗಿ ಈ ಕಛೇರಿಯ Email ID aeemsnagar@gmail.com / Wats App / Tappal ಮುಖಾಂತರ ಸಲ್ಲಿಸಲು ಕೋರಿದೆ. |
|---|---|---|---|
| 1 | ಶ್ರೀ ಘನಶ್ಯಾಮ್ ಯಾದವ್, ಸ್ಥಳೀಯರು, ರವರು ಮಾತನಾಡುತ್ತಾ, ಸೀತಮ್ಮ ರಸ್ತೆ, ಐಟಿಸಿ 1ನೇ ಅಡ್ಡರಸ್ತೆಯಲ್ಲಿ 02 ಬೀದಿ ದೀಪಗಳ ಕಂಬಗಳು ರಸ್ತೆಗೆ ಅಡ್ಡವಾಗಿದ್ದು, ಅದನ್ನು ಬೇರೆ ಕಡೆಗೆ ಸ್ಥಳಾಂತರಿಸಲು ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು **AEE/AE** ಬೀದಿ ದೀಪಗಳ ನಿರ್ವಹಣೆ | |
| 2 | ಶ್ರೀ ಘನಶ್ಯಾಮ್ ಯಾದವ್, ಸ್ಥಳೀಯರು, ರವರು ಮಾತನಾಡುತ್ತಾ, ಐಟಿಸಿ 1ನೇ ಅಡ್ಡರಸ್ತೆಯಲ್ಲಿ ಮನೆಯ ಮಾಲೀಕರು ರಸ್ತೆಯ ಮೇಲೆ ಗೇಟ್ ನಿರ್ಮಾಣ ಮಾಡಿದ್ದು, ಇದರಿಂದ ಸಾರ್ವಜನಿಕರು ಹಾಗೂ ವಾಹನ ಸವಾರರಿಗೆ ತೊಂದರೆಯಾಗುತ್ತಿದ್ದು, ಇದನ್ನು | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು **AEE/AE** ಮಾರುತಿಸೇವಾನಗರ ಉಪ ವಿಭಾಗ | |

| | | | |
|---|---|---|---|
| | ತೆರವುಗೊಳಿಸಲು ಸಭೆಗೆ ತಿಳಿಸಿದರು. | | |
| 3 | ಶ್ರೀ ಘನಶ್ಯಾಮ್ ಯಾದವ್, ಸ್ಥಳೀಯರು, ರವರು ಮಾತನಾಡುತ್ತಾ, ಅರಳಿಮರ ರಸ್ತೆ, 3ನೇ ಮತ್ತು 4ನೇ ಅಡ್ಡರಸ್ತೆಯಲ್ಲಿ ಚರಂಡಿಯ ಪಕ್ಕದಲ್ಲಿ ಸ್ಲಾಬ್‌ಗಳನ್ನು ಅಳವಡಿಸಿಕೊಂಡು ಕಾರ್ ನಿಲುಗಡೆ ಮಾಡುತ್ತಿದ್ದು, ಇದರಿಂದ ಸಾರ್ವಜನಿಕರು ಹಾಗೂ ವಾಹನ ಸವಾರರಿಗೆ ತೊಂದರೆಯಾಗುತ್ತಿದ್ದು, ಇದನ್ನು ತೆರವುಗೊಳಿಸಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು **AEE/AE** ಮಾರುತಿಸೇವಾನಗರ ಉಪ ವಿಭಾಗ | |
| 4 | ಶ್ರೀ ಘನಶ್ಯಾಮ್ ಯಾದವ್, ಸ್ಥಳೀಯರು, ರವರು ಮಾತನಾಡುತ್ತಾ, ಪಾರ್ಕ್ ರಸ್ತೆ ಹಾಗೂ 3ನೇ ಅಡ್ಡರಸ್ತೆ, ಕೃಷ್ಣಪ್ಪ ಲೇಔಟ್ ಇಲ್ಲಿರುವ ಚರಂಡಿಯಲ್ಲಿ ತುಂಬಿರುವ ಹೂಳನ್ನು ತೆರವುಗೊಳಿಸಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು **AEE/AE (Engineering)** | |
| 5 | ಶ್ರೀ ಘನಶ್ಯಾಮ್ ಯಾದವ್, ಸ್ಥಳೀಯರು, ರವರು ಮಾತನಾಡುತ್ತಾ, ಬೋರ್‌ವೆಲ್ ಪೈಪ್‌ಲೈನ್ ಅನ್ನು ಚರಂಡಿಯಲ್ಲಿ ಅಳವಡಿಸಲಾಗಿದ್ದು, ಕೊಳಚೆ ನೀರು ಪೈಪ್‌ಲೈನ್ ನಲ್ಲಿ ಬೆರೆಯುವ ಸಾಧ್ಯತೆ ಇರುವುದರಿಂದ ಇದನ್ನು ಚರಂಡಿಯಿಂದ ಬೇರೆ ಕಡೆಗೆ ಹಾಕಲು ಕ್ರಮ ವಹಿಸಲು ಕ್ರಮ ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು **AEE/AE (BWSSB)** | |
| 6 | ಶ್ರೀ ಘನಶ್ಯಾಮ್ ಯಾದವ್, ಸ್ಥಳೀಯರು, ರವರು ಮಾತನಾಡುತ್ತಾ, ಕೋದಂಡರಾಮ ದೇವಸ್ಥಾನ ರಸ್ತೆಯಲ್ಲಿ ಚರಂಡಿಯ ಸ್ಲಾಬ್ ಮುರಿದು ಬಿದ್ದಿದ್ದ, ಅದನ್ನು ಸರಿಪಡಿಸಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು **AEE/AE (Engineering)** | |
| 7 | ಶ್ರೀ ಘನಶ್ಯಾಮ್ ಯಾದವ್, ಸ್ಥಳೀಯರು, ರವರು ಮಾತನಾಡುತ್ತಾ, ಬಾಣಸವಾಡಿ ಮುಖ್ಯರಸ್ತೆಯಲ್ಲಿ ಪಾದಾಚಾರಿ ಮಾರ್ಗದಲ್ಲಿ ಅಡ್ಡಲಾಗಿ ಬೆಳೆದಿದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ ಅದನ್ನು ಕೂಡಲೇ ತೆರವುಗೊಳಿಸಲು ಸಭೆಗೆ ತಿಳಿಸಿದರು. | (ವಲಯ ಅರಣ್ಯಾಧಿಕಾರಿಗಳು) **(Forest Department)** | |
| 8 | ಶ್ರೀ ಘನಶ್ಯಾಮ್ ಯಾದವ್, ಸ್ಥಳೀಯರು, ರವರು ಮಾತನಾಡುತ್ತಾ, 1ನೇ ಅಡ್ಡರಸ್ತೆ, ಆಂಧ್ರ ಕಾಲೋನಿ ಮತ್ತು 2ನೇ ಅಡ್ಡರಸ್ತೆ, | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು **AEE/AE** | |

| | | | |
|---|---|---|---|
| | ಕೃಷ್ಣಪ್ಪ ಲೇಔಟ್‌ನಲ್ಲಿ ರಸ್ತೆಯ ಮೇಲೆ ಶೆಡ್ ನಿರ್ಮಾಣ ಮಾಡಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಅದನ್ನು ಕೂಡಲೇ ತೆರವುಗೊಳಿಸಲು ಸಭೆಗೆ ತಿಳಿಸಿದರು. | **(Engineering)** | |
| 9 | ಶ್ರೀ ಗೋಪಾಲ್ ರೆಡ್ಡಿ, ಸ್ಥಳೀಯರು, ರವರು ಮಾತನಾಡುತ್ತಾ, ಐ.ಓ.ಸಿ ಸರ್ಕಲ್‌ನಲ್ಲಿ ಬಿದ್ದಿರುವ ಡೆಬ್ರೀಸ್ ಅನ್ನು ತೆರವುಗೊಳಿಸಲು ಬೃಹತ್ ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ತಿಳಿಸಲಾಗಿದ್ದು, ಈವರೆವಿಗೂ ತೆರವುಗೊಳಿಸಿರುವುದಿಲ್ಲ ಹಾಗೂ ಈ ಪ್ರದೇಶದಲ್ಲಿ ಮಳೆಗಾಲದಲ್ಲಿ ನೀರು ಶೇಖರಣೆಯಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಈ ಬಗ್ಗೆ ಕ್ರಮ ವಹಿಸಲು ತಿಳಿಸಲು ಸಭೆಗೆ ಕೋರಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು **AEE/AE- Major Road** | |
| 10 | ಶ್ರೀ ಕಾರೂನ್, ಸ್ಥಳೀಯರು, ರವರು ಮಾತನಾಡುತ್ತಾ, ಕಮ್ಮನಹಳ್ಳಿ ಮುಖ್ಯರಸ್ತೆಯಲ್ಲಿ ಪಾದಾಚಾರಿ ಮಾರ್ಗದಲ್ಲಿ ತಳ್ಳುವ ಗಾಡಿಗಳನ್ನು ಇಟ್ಟು ವ್ಯಾಪಾರ ವಹಿವಾಟು ನಡೆಸುತ್ತಿರುವುದರಿಂದ ವಾಹನ ಸಂಚಾರ ದಟ್ಟಣೆ ಉಂಟಾಗುತ್ತಿದ್ದು, ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು ಈ ಬಗ್ಗೆ ಕ್ರಮ ವಹಿಸಲು ಸಭೆಗೆ ತಿಳಿಸಿದರು. | ಬಾಣಸವಾಡಿ ಪೊಲೀಸ್ ಠಾಣೆ (ಸಂಚಾರ) | |
| 11 | ಶ್ರೀ ಕಾರೂನ್, ಸ್ಥಳೀಯರು, ರವರು ಮಾತನಾಡುತ್ತಾ, ಐ.ಓ.ಸಿ ಮೇಲುಸೇತುವೆ ಮೇಲಿರುವ ಬೀದಿ ದೀಪಗಳ ಕಂಬಗಳು ರಸ್ತೆಗೆ ಬಾಗಿದ್ದು, ಇವುಗಳು ವಾಹನ ಸವಾರರ ಮೇಲೆ ಬೀಳುವ ಸಂಭವ ಇದ್ದು, ಕೂಡಲೇ ಅದನ್ನು ಸರಿಪಡಿಸಲು ಕ್ರಮ ವಹಿಸಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು **AEE/AE** ಬೀದಿ ದೀಪಗಳ ನಿರ್ವಹಣೆ | |
| 12 | ಶ್ರೀ ಕಾರೂನ್, ಸ್ಥಳೀಯರು, ರವರು ಮಾತನಾಡುತ್ತಾ, ಜಯಲಕ್ಷ್ಮಿ ಶಾಲೆ ರಸ್ತೆಯಲ್ಲಿರುವ ವಿದ್ಯುತ್ ಕಂಬಗಳು ಹಳೆಯದಾಗಿದ್ದು, ಇವುಗಳು ಬೀಳುವ ಸಂಭವ ಇದ್ದು, ಕೂಡಲೇ ಅದನ್ನು ಸರಿಪಡಿಸಲು ಕ್ರಮ ವಹಿಸಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು **AEE/AE (Bescom)** | |

| | | | |
|---|---|---|---|
| 13 | ಶ್ರೀ ಕಾರೂನ್, ಸ್ಥಳೀಯರು, ರವರು ಮಾತನಾಡುತ್ತಾ, ಜಯಲಕ್ಷ್ಮಿ ಶಾಲೆ ರಸ್ತೆಯಲ್ಲಿರುವ ಚಿಕನ್ ಅಂಗಡಿಯವರು ಕೋಳಿ ಶೇಖರಿಸುವ ಡಬ್ಬಿಗಳನ್ನು ರಸ್ತೆಯ ಮೇಲೆ ಇಟ್ಟಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಅದನ್ನು ಕೂಡಲೇ ತೆರವುಗೊಳಿಸಲು ಕ್ರಮ ವಹಿಸಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು **AEE/SHI/JHI (ಘನತ್ಯಾಜ್ಯ ನಿರ್ವಹಣೆ)** | |
| 14 | ಶ್ರೀ ಕಾರೂನ್, ಸ್ಥಳೀಯರು, ರವರು ಮಾತನಾಡುತ್ತಾ, ಮುನೀಶ್ವರ ದೇವಸ್ಥಾನ ರಸ್ತೆಯಲ್ಲಿ ಟೀ ಅಂಗಡಿಯವರು ಪಾದಾಚಾರಿ ಮಾರ್ಗದ ಮೇಲೆ ಟೇಬಲ್ ಹಾಕಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಇದನ್ನು ಕೂಡಲೇ ತೆರವುಗೊಳಿಸಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು **AEE/AE (Engineering)** | |
| 15 | ಶ್ರೀ ಕುಮಾರ್, ಸ್ಥಳೀಯರು, ರವರು ಮಾತನಾಡುತ್ತಾ, ಮಾರುತಿ ಶಾಲೆ ಎದುರುಗಡೆ ಇರುವ ಚರಂಡಿಯಲ್ಲಿ ತುಂಬಿರುವ ಹೂಳನ್ನು ತೆರವುಗೊಳಿಸಲು ಹಾಗೂ ಹುಚ್ಚಮ್ಮ ದೇವಸ್ಥಾನ ರಸ್ತೆಯನ್ನು ಅಭಿವೃದ್ಧಿಪಡಿಸಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು **AEE/AE (Engineering)** | |
| 16 | ಶ್ರೀ ಕೆಂಪರಾಜ್, ಸ್ಥಳೀಯರು, ರವರು ಮಾತನಾಡುತ್ತಾ, ಕಮ್ಮನಹಳ್ಳಿ ಮುಖ್ಯರಸ್ತೆಯಲ್ಲಿ ಹೂ ಗಿಡಗಳ ಮುಂಭಾಗದಲ್ಲಿ ಬಿದ್ದಿರುವ ಡೆಬ್ರೀಸ್ ನ್ನು ತೆರವುಗೊಳಿಸಲು ಹಾಗೂ ರಮೇಶ್ ಕುಮಾರ್ ರಸ್ತೆಯಲ್ಲಿ ರಸ್ತೆ ಗುಂಡಿಗಳು ಬಿದ್ದಿ, ಅದನ್ನು ಸರಿ ಪಡಿಸಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು **AEE/AE (Engineering)** | |

**ಕೊನೆಯದಾಗಿ ಮಾನ್ಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳು ಮಾತನಾಡಿ,** ಇಂದಿನ ಸಭೆಯಲ್ಲಿ ಗೈರು ಹಾಜರಾಗಿರುವ ಅಧಿಕಾರಿ/ನೌಕರರುಗಳು ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಾಗಲು ಕ್ರಮ ವಹಿಸುವುದು. ಹಾಗೂ ಇಂದಿನ ಸಭೆಗೆ ಗೈರು ಹಾಜರಾಗಿರುವ ಅಧಿಕಾರಿ/ನೌಕರರಿಗೆ ನೋಟೀಸ್ ನೀಡಲು ತಿಳಿಸಿ, ಗೈರು ಹಾಜರಾಗಿರುವ ಎಲ್ಲಾ ಅಧಿಕಾರಿಗಳ ಮೇಲಾಧಿಕಾರಿಗಳಿಗೆ ಸೂಕ್ತ ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ವಿಷಯಗಳ ಬಗ್ಗೆ ಆಯಾ ಇಲಾಖೆಯ ಅಧಿಕಾರಿ / ನೌಕರರುಗಳು ಕ್ರಮ ಕೈಗೊಂಡು ಮುಂದಿನ ಸಭೆಗೆ ತಿಳಿಸಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

**ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು**
**ವಾರ್ಡ್ ಸಂಖ್ಯೆ.28/101, ಕಮ್ಮನಹಳ್ಳಿ,**

**ನೋಡೆಲ್ ಅಧಿಕಾರಿ**
**ವಾರ್ಡ್ ಸಂಖ್ಯೆ.28/101, ಕಮ್ಮನಹಳ್ಳಿ**

ಪ್ರತಿಯನ್ನು

1) ಕಾರ್ಯಪಾಲಕ ಅಭಿಯಂತರರು, ಸರ್ವಜ್ಞನಗರ ವಿಭಾಗ, ಬಿ.ಬಿ.ಎಂ.ಪಿ
2) ಕಾರ್ಯಪಾಲಕ ಅಭಿಯಂತರರು, ಯೋಜನೆ (ಪೂರ್ವ ವಲಯ) ಬಿ.ಬಿ.ಎಂ.ಪಿ
3) ಕಾರ್ಯಪಾಲಕ ಅಭಿಯಂತರರು, ವಿದ್ಯುತ್ (ಪೂರ್ವ ವಲಯ) ಬಿ.ಬಿ.ಎಂ.ಪಿ
4) ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
5) ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ,
6) ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯಗಳು, ಬಿ.ಬಿ.ಎಂ.ಪಿ
7) ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ, ಬಿ.ಬಿ.ಎಂ.ಪಿ
8) ತೋಟಗಾರಿಕಾ ಅಧೀಕ್ಷಕರು, (ಪೂರ್ವ ವಲಯ)
9) ಆರೋಗ್ಯ ವೈದ್ಯಾಧಿಕಾರಿಗಳು, (ಪೂರ್ವ ವಲಯ)
10) ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣಾ ವಿಭಾಗ
11) ಸಹಾಯಕ ಕಂದಾಯ ಅಧಿಕಾರಿ. ಮಾರುತಿ ಸೇವಾನಗರ ಉಪ ವಿಭಾಗ, ಬಿಬಿಎಂಪಿ
12) ಕಲ್ಯಾಣಾಧಿಕಾರಿಗಳು, (ಪೂರ್ವ ವಲಯ) ಬಿ.ಬಿ.ಎಂ.ಪಿ
13) ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಪೂರ್ವ ವಲಯ) ಬಿ.ಬಿ.ಎಂ.ಪಿ
14) ಪೋಲಿಸ್ ಇನ್ಸ್‌ಪೆಕ್ಟರ್, ಬಾಣಸವಾಡಿ.
15) ಪೋಲಿಸ್ ಇನ್ಸ್‌ಪೆಕ್ಟರ್,(ಸಂಚಾರಿ), ಬಾಣಸವಾಡಿ.
16) ಕಛೇರಿ ಪ್ರತಿ.